**ಇಂದು ದಿನಾಂಕ 28.06.2025 ರಂದು ಪಿಡಬ್ಲ್ಯೂ -2 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 8 ನೇ ಪ್ರತಿವಾದಿ ಪರ ವಕೀಲರಿಂದಃ**

**1.** ನಮ್ಮ ವಂಶದ ಮೂಲ ಪುರುಷನ ಹೆಸರು ಮುನಿಯಪ್ಪ. ಟಿ.ಎಂ.ನಾರಾಯಣಸ್ವಾಮಿ ಮತ್ತು ರಾಮಯ್ಯ ಮುನಿಯಪ್ಪನ ಮಕ್ಕಳು ಎಂದರೆ ನಿಜ. ಮುನಿಯಪ್ಪನ ಕಾಲದಲ್ಲಿ ದಾವಾ ಆಸ್ತಿ ಮುನಿಯಪ್ಪನಿಗೆ ಸಂಬಂಧಿಸಿರಲಿಲ್ಲ ಎಂದರೆ ನಿಜ. ದಾವಾ ಆಸ್ತಿಯು ರಾಮಯ್ಯನಿಗೆ ಸರ್ಕಾರದಿಂದ ಮಂಜೂರಾಗಿದೆ ಎಂದರೆ ನಿಜ. ಮಂಜೂರಾದ ನಂತರ ರಾಮಯ್ಯ ಮತ್ತು ನಾರಾಯಣಸ್ವಾಮಿರವರು ದಾವಾ ಆಸ್ತಿಯನ್ನು ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. 1996 ರಲ್ಲಿ ನಾರಾಯಣಸ್ವಾಮಿರವರು ನನಗೆ 1 ಎಕರೆ ಭಾಗವಾಗಿದೆ ಎಂದು 8 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. 1996 ರಿಂದ 1 ಎಕರೆ ಜಮೀನಿಗೆ ಆರ್.ಟಿ.ಸಿ.ಗಳು 8 ನೇ ಪ್ರತಿವಾದಿಯ ಹೆಸರಿನಲ್ಲಿ ಬರುತ್ತಿವೆ ಎಂದರೆ ಸುಳ್ಳು. ರಾಮಯ್ಯನವರು ಯಾವಾಗ ಮೃತರಾಗಿದ್ದಾರೆ ಎಂದು ಗೊತ್ತಿಲ್ಲ. ಅಕ್ಕಯ್ಯಮ್ಮ ರಾಮಯ್ಯನ ಹೆಂಡತಿ ಎಂದರೆ ನಿಜ. ಅಕ್ಕಯ್ಯಮ್ಮನವರು 1 ಎಕರೆ ಜಮೀನನ್ನು ಪರಿವರ್ತನೆ ಮಾಡಿಸಿ ತಮ್ಮ ಭಾಗಕ್ಕೆ ಬಂದಿದೆ ಎಂದು 1996 ರಲ್ಲಿ 8 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾರಾಯಣಸ್ವಾಮಿರವರು ಮಾರಾಟ ಮಾಡಿರುವುದನ್ನು ಅಕ್ಕಯ್ಯಮ್ಮ ಮತ್ತು ರಾಮಯ್ಯನವರು ಯಾವತ್ತೂ ಪ್ರಶ್ನಿಸಿಲ್ಲ ಎಂದರೆ ಗೊತ್ತಿಲ್ಲ. 1996 ರಿಂದ 8 ನೇ ಪ್ರತಿವಾದಿಗೆ ಆಗಿರುವ ಯಾವುದೇ ದಾಖಲೆಗಳನ್ನು ಅಕ್ಕಯ್ಯಮ್ಮ ಮತ್ತು ಮುನಿರಾಜಮ್ಮ ಪ್ರಶ್ನಿಸಿಲ್ಲ ಎಂದರೆ ಗೊತ್ತಿಲ್ಲ. ಟಿ.ಎಂ. ನಾರಾಯಣಪ್ಪನ ಮಕ್ಕಳೂ ಸಹ 1996 ರಿಂದ 2009 ವರೆಗೂ ದಾವಾ ಆಸ್ತಿಯಲ್ಲಿ ಭಾಗ ಇದೆ ಎಂದು ದಾವೆ ಹಾಕಿಲ್ಲ ಎಂದರೆ ಗೊತ್ತಿಲ್ಲ. ಟಿ.ಎಂ. ನಾರಾಯಣಪ್ಪನ ಮಕ್ಕಳೂ ಸಹ 1996 ರಿಂದ 2009 ವರೆಗೂ ದಾವಾ ಆಸ್ತಿಯ ದಾಖಲೆಗಳನ್ನು ಪ್ರಶ್ನಿಸಿಲ್ಲ ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲೂ ಸಹ ನಾವು ಮಾರಾಟವನ್ನು ಪ್ರಶ್ನೆ ಮಾಡಿಲ್ಲ ಎಂದರೆ ಗೊತ್ತಿಲ್ಲ. ನನಗೆ ಈ ದಾವೆಯ ಬಗ್ಗೆ ಏನೂ ಗೊತ್ತಿಲ್ಲದಿದ್ದರೂ ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**

**ದೇವನಹಳ್ಳಿ.**